ಆ) ರಾಜ್ಯದಲ್ಲಿ ಹೆಲಿಪ್ಯಾಡ್‌ಗಳನ್ನು ಯಾವ ಯಾವ ಸ್ಥಳಗಳಲ್ಲಿ ನಿರ್ಮಿಸಲಾಗಿದೆ ಮತ್ತು ಇದರಿಂದಾಗಿ ಬೊಕ್ಕಸಕ್ಕೆ ಉಂಟಾದ ವೆಚ್ಚವೆಷ್ಟು? (ಪರ್ಷವಾರು ಮಾಹಿತಿಯನ್ನೊದಗಿಸಬೇಕಾಗಿ ವಿನಂತಿ)

ಮಲಪ್ರಭಾ ಯೋಜನೆಯಲ್ಲಿ ಸವುಳಾಗಿರುವ ಕ್ಷೇತ್ರ

೩೬೮ (೨೨೪) ಶ್ರೀ ಬಿ. ಆರ್ ಯಾವಗಲ್ (ನರಗುಂದ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಮಲಪ್ರಭಾ ನೀರಾವರಿ ಪ್ರದೇಶದಲ್ಲಿ ನೀರಾವರಿಯಿಂದ ಒಟ್ಟು ಎಷ್ಟು ಕ್ಷೇತ್ರ ಸವುಳಾಗಿದೆ. (ತಾಲೂಕುವಾರು ಮಾಹಿತಿಯನ್ನು ಒದಗಿಸಬೇಕಾಗಿ ವಿನಂತಿ.)

(ಆ) ಯಾವ ಪರಿಹಾರವನ್ನು ಸವುಳಾದ ಜಮೀನುಗಳ ರೈತರಿಗೆ ಕೊಡಲಾಗಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ನೀರಾವರಿಯಿಂದ ಸವುಳಾಗಿರುವ ಒಟ್ಟು ಕ್ಷೇತ್ರ ೩೮೯.೭೦ ಹೆಕ್ಟೇರುಗಳು. ತಾಲ್ಲೂಕವಾರು ವಿವರಗಳು ಹೀಗಿವೆ.

(೧) ಸವದತ್ತಿ ತಾಲೂಕು	...	೨೪೮.೮೦ ಹೆಕ್ಟೇರುಗಳು
(೨) ರಾಮದುರ್ಗ ತಾಲೂಕು	...	೧೪೧.೭೦ ಹೆಕ್ಟೇರುಗಳು
	ಒಟ್ಟು	೩೮೯.೭೦ ಹೆಕ್ಟೇರುಗಳು

(ಆ) ಈ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

೪.೩೦ ಪಿ. ಎಂ.

ಇದರ ಜೊತೆಗೆ ಇನ್ನೊಂದು ವಿಷಯವನ್ನು ಹೇಳಲಿಚ್ಚಿಸುತ್ತೇನೆ. ಸರ್ಕಾರ ಈ ಸಾರಿ ಈ ಬಾಬಿಗೆ ಹೆಚ್ಚು ಆದ್ಯತೆ ಕೊಡಬೇಕೆಂದು ನಿರ್ಣಯ ಮಾಡಿದೆ. ೧೯೮೧-೮೨ರಲ್ಲಿ ೧೭ ಲಕ್ಷ ರೂಪಾಯಿ ಖರ್ಚು ಮಾಡಿದರೆ ಈ ಸಾರಿ ೪೨೧ ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿದ್ದೇವೆ. ಕಾಡಾ ವ್ಯಾಪ್ತಿಯಲ್ಲಿ ಬರತಕ್ಕ ೨ ಸಾವಿರ ಹೆಕ್ಟೇರ್ ಭೂಮಿಯನ್ನು ಲೆವಲಿಂಗ್ ಮಾಡತಕ್ಕದ್ದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಬಿ. ಆರ್. ಯಾವಗಲ್.—ನಾನು ಮಲಪ್ರಭಾ ಯೋಜನೆಯಲ್ಲಿ ಎಷ್ಟು ಕ್ಷೇತ್ರ ಸವಳಾಗಿದೆ ಎಂದು ಕೇಳಿದ್ದಕ್ಕೆ ನನಗೆ ಸಿಕ್ಕ ಉತ್ತರ ೨ ತಾಲ್ಲೂಕಿಗೆ ಸಂಬಂಧಪಟ್ಟದ್ದು ಮಾತ್ರ. ಇನ್ನೂ ೩ ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಹೇಳಬೇಕಾಗಿದೆ. ಆದರಲ್ಲೂ ನಾನು ಮುಖ್ಯವಾಗಿ ಕೇಳಿದ್ದು ನರಗುಂದ ಮತ್ತು ನಗಲಗುಂದ ಕ್ಷೇತ್ರದಲ್ಲಿ ಎಷ್ಟು ಭೂಮಿ ಸವಳಾಗಿದೆ ಎಂದು. ಅದಕ್ಕೆ ಉತ್ತರ ಬಂದಿಲ್ಲ. ಈ ಕ್ಷೇತ್ರದಲ್ಲಿ ಕಪಿಲೆ ಎಂಬ ಹಳ್ಳಿ ಇದೆ. ಆಲ್ಲಿ ಮರಗಳು ಬೀಳುತ್ತಿವೆ. ಜಮೀನು ಸವಳಾಗಿದೆ. ತಾವು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಆದರೆ ಮರಗಳು ಬೀಳುವುದನ್ನು ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಹಳ್ಳಿಯಲ್ಲಿರತಕ್ಕ ಜನರನ್ನು ಬೇರೆ ಕಡೆಗೆ ಸಾಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ? ನೀವು ಏನೇ ಕಾರ್ಯಕ್ರಮ ಮಾಡಿದರೂ ಸವಳಾಗುವುದನ್ನು ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅಂಥದ್ದಕ್ಕೆ ಪರಿಹಾರ ಕೊಡುವುದಕ್ಕೆ ಸಾಧ್ಯತೆ ಇದೆಯೇ? ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ಕಮ್ಯಾಂಡ್ ಏರಿಯದಲ್ಲಿ ಬರತಕ್ಕ ಗ್ರಾಮಗಳು ಏನಿವೆ, ಅಂಥಾ ಊರೊಳಗೆ ಸೀಪೇಜ್ ಹೆಚ್ಚಾದ ಕಡೆ ಚಾನಲ್ ನೀರು ಬರುವುದಕ್ಕೆ ಅವಕಾಶ ಆಗದ ಹಾಗೆ ಹೊರಗಡೆ ಡ್ರೈನೇಜ್ ಮಾಡತಕ್ಕ ಅವಶ್ಯಕತೆ ಇದೆ. ಒಂದು ವೇಳೆ ಊರನ್ನು ಷಿಫ್ಟ್ ಮಾಡತಕ್ಕ ಪ್ರಸಂಗ ಬಂದರೆ ಅನಿವಾರ್ಯವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಇದುವರೆಗೆ ಆ ಬಗ್ಗೆ ಸರ್ಕಾರ ನೀತಿ ನಿರೂಪಣೆ ಮಾಡಿಲ್ಲ. ಡ್ಯಾಂ ಕಟ್ಟುವಾಗ ಮುಳುಗಡೆಯಾಗುವ ಹಳ್ಳಿಗಳನ್ನು ಷಿಫ್ಟ್ ಮಾಡು

ತ್ತಿದ್ದೆವು. ಕಮ್ಯಾಂಡ್ ಏರಿಯದಲ್ಲಿ ಬರತಕ್ಕ ಹಳ್ಳಿಗಳಲ್ಲಿ ಕೂಡ ಇದೇ ರೀತಿಯ ಪರಿಸ್ಥಿತಿ ಉದ್ಭವವಾಗಿದೆ. ಆದ್ದರಿಂದ, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಡ್ರೈನೇಜ್‌ನಲ್ಲಿ ಸೀಪೇಜ್ ಆದರೆ ಷಿಪ್ಟ್ ಮಾಡಬೇಕೆಂದು ಆರೋಗ್ಯ ಇಲಾಖೆಯವರು ಹೇಳಿದರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ. ಭೂಮಿಯಲ್ಲಿ ಉಷ್ಣಾಂಶ ಹೆಚ್ಚಾಗಿ ಬೆಳೆ ಹಾಳಾಗಿ ಜಿಳಿಗು. ಸವಳು ಬರುತ್ತದೆಂದು ಇದೆ. ಅದನ್ನು ಸರಿಪಡಿಸಿಕೊಳ್ಳಲು ಸಣ್ಣ ಹಿಡುವಳಿದಾರರಿಗೆ ಸರ್ಕಾರದ ಖರ್ಚಿನಲ್ಲಿ ರಿಯಾಯಿತಿ ಕೊಡುತ್ತದೆ. ದೊಡ್ಡ ಹಿಡುವಳಿದಾರರು ಪೂರ್ಣ ಖರ್ಚನ್ನು ಅವರೇ ವಹಿಸಿಕೊಳ್ಳಬೇಕಾಗುತ್ತದೆ. ಡ್ರೈನೇಜನ್ನು ಸರ್ಕಾರದ ಖರ್ಚಿನಿಂದ ಮಾಡುತ್ತೇವೆ. ನರಗುಂದ, ನವಲಗುಂದ ಅಥವಾ ಯಾವುದೇ ಭಾಗದಲ್ಲಿ ಆಗಲಿ ಪ್ರಾಜೆಕ್ಟಿನ ಹಿಂಭಾಗದಲ್ಲಿ ಸವಳು ಬರತಕ್ಕ ಭೂಮಿಯ ಉಷ್ಣಾಂಶವನ್ನು ತೆಗೆಯುವ ಕೆಲಸ ಮಾಡುತ್ತೇವೆ ಮತ್ತು ರೈತರಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಎರಡು ಮೂರು ವರ್ಷಗಳಿಂದ ಈ ಕಾರ್ಯಕ್ರಮ ಹಾಗೇ ಮುಂದುವರಿಯುತ್ತ ಬರುತ್ತಿದೆ. ಈಗ ತಮ್ಮ ಕಾರ್ಯಕ್ರಮದ ಪ್ರಕಾರ ಆಗುತ್ತದೆಂಬ ಭರವಸೆ ಇಡುತ್ತೇನೆ. ಅದು ಆಗುವವರೆಗೆ ಅವರಿಗೇನಾದರೂ ಬೆಳೆ ಹಾನಿಯಾದರೆ ಅಥವಾ ಬೇರೆ ರೀತಿಯ ತೊಂದರೆಗಳಾದರೆ ಅದಕ್ಕೆ ಪರಿಹಾರ ಕೊಡಲಿಕ್ಕೆ ಸಾಧ್ಯವೆ?

ಶ್ರೀ ಹೆಚ್. ಡಿ. ದೇವೇಗೌಡ.—ಬೆಳೆ ಹಾನಿಗೆ ಕೊಡುವುದು ಕಷ್ಟ. ಮುಳುಗಡೆಯಾದ ಜಮೀನ್ದಾರರಿಗೆ ಪರಿಹಾರ ಕೊಡುತ್ತೇವೆ. ಈ ಒಂದು ಕಾರ್ಯಕ್ರಮದಿಂದ ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕ ರೈತರಿಗೆ ಲಾಭವಿದೆ. ಆಲ್ಲಿ ಏನು ಪರಿಹಾರ ಕೊಡುತ್ತೇವೆ ಅದನ್ನು ಇಲ್ಲಿ ಕೊಡುವುದಕ್ಕಾಗುವುದಿಲ್ಲ. ಇಲ್ಲಿ ನಾರ್ಮ್ಸ್ ಇಲ್ಲ, ಆಲ್ಲಿ ನಾರ್ಮ್ಸ್ ಇದೆ. ಭೂಮಿ ಒಂದೇ ಸಾರಿ ಸವಳು ಬರುವುದಿಲ್ಲ. ಕ್ರಮೇಣ ೪–೬ ವರ್ಷಗಳ ಕಾಲ ನೀರು ನಿಂತರೆ ಬರುತ್ತದೆ. ಡ್ರೈನೇಜ್ ಮಾಡತಕ್ಕದ್ದರ ಬಗ್ಗೆ ಹೇಳಿದ್ದಾರೆ. ದೊಡ್ಡ ಹಿಡುವಳಿದಾರರಿಗೆ ಮೆಯಿನ್ ಡ್ರೈನೇಜ್ ಮಾಡಿಕೊಡುತ್ತೇವೆ. ಬಾಕಿಯದನ್ನು ಅವರ ಖರ್ಚಿನಲ್ಲೇ ಮಾಡಿಕೊಳ್ಳಬೇಕಾಗುತ್ತದೆ. ಈ ವರ್ಷ ಈ ಬಾಬಿಗಾಗಿ ೪ ಕೋಟಿ ೭೧ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಆದ್ಯತೆ ಮೇಲೆ ಕೆಲಸ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಸವಳು ಬಂದಿರತಕ್ಕದ್ದರ ಬಗ್ಗೆ ಮಂತ್ರಿಗಳು ಹೇಳಿದರು. ಅಂದರೆ ಯಾವುದಾದರೂ.....

ಶ್ರೀ ಹೆಚ್. ಡಿ. ದೇವೇಗೌಡ.—ಆಯುಕಟ್ಟು. ಕಮ್ಯಾಂಡ್ ಏರಿಯ ಮತ್ತು ಅಚ್ಚುಕಟ್ಟಿನಲ್ಲಿ ಬರತಕ್ಕ ಜಮೀನು.

ಶ್ರೀ ಜೆ. ಎಸ್. ದೊಡ್ಡಮೇಟಿ.—ಸವಳು ಹೋಗುವುದಕ್ಕ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಎಷ್ಟರ ಮಟ್ಟಿಗೆ ಸವಳು ಹೋಗಿದೆ ಮತ್ತು ಎಷ್ಟರ ಮಟ್ಟಿಗೆ ಭೂಮಿ ಪ್ಯಸಾಯಕ್ಕೆ ಸಿದ್ಧವಾಗಿದೆ ಎಂಬುದು ಕಂಡುಬಂದಿದೆ ?

ಶ್ರೀ ಹೆಚ್. ಡಿ. ದೇವೇಗೌಡ.—ನಿರ್ದಿಷ್ಟವಾಗಿ ಯಾವುದಾದರೂ ಜಮೀನಿನ ಬಗ್ಗೆ ಹೇಳಿದರೆ ಹೇಳಬಲ್ಲೆ. ಮಲಪ್ರಭ ಮತ್ತು ಘಟಪ್ರಭ ಯೋಜನೆಯ ಹಿಂಭಾಗದಲ್ಲಿ ಪ್ರವಾಸ ಮಾಡಿ ನೋಡಿದ್ದೇನೆ. ನರಗುಂದ ಮತ್ತು ನವಲಗುಂದದ ಘಟನೆ ನಡೆದ ಸಂದರ್ಭದಲ್ಲಿ ಅಲ್ಲೆಲ್ಲ ಹೋಗಿ ನೋಡಿದ್ದೇನೆ. ಈಗ ಡ್ರೈನೇಜ್ ಸಿಸ್ಟಂ ಮಾಡಿದ್ದೇವೆ, ಚೆನ್ನಾಗಿ ಫಂಕನ್ ಆಗುತ್ತಿದೆ. ಈಗ ಅಲ್ಲಿ ಸವಳು ಇಲ್ಲವೆಂದು ತಿಳಿದಿದ್ದೇನೆ. ಎಲ್ಲಿಯಾದರೂ ದೋಷವಿದ್ದುದನ್ನು ಕಂಡು ತಿಳಿಸಿದರೆ ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಕುರುಡಗಿ.—

ಶ್ರೀ ಜರತಾರ್‌ಗರ್.—

(ಮಾನ್ಯ ಸದಸ್ಯರುಗಳು ಹಾಜರಿರಲಿಲ್ಲ)